ಜೈನ್ ಕಾಲೇಜ್, ಜಯನಗರ.

ದ್ವಿತೀಯ ಪಿ.ಯು.ಸಿ – ಮಾದರಿ ಪ್ರಶ್ನೆಪತ್ರಿಕೆ 02 – 2018

ಸಮಯ : 3.15 ಗಂಟೆ ವಿಷಯ:– ಕನ್ನಡ ಅಂಕಗಳು–100

---

## ಅ– ವಿಭಾಗ

**1. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ: 1X10=10**

1. ಮಯ ತನೂಜೆ ಎಂದರೆ ಯಾರು ?
2. ಯಾರ ಬಸುರನ್ನು ಬಗೆಯುವುದಾಗಿ ಭೀಮ ಹೇಳುತ್ತಾನೆ ?
3. ಕನಸು ಬಂಡಿಯ ಕೆಳಗೆ ನಿದ್ರಿಸುವುದು ಹೇಗೆ ?
4. ತೈಲ ತೀರಿದ್ದು ಹೇಗೆ ತಿಳಿಯುತ್ತದೆ ?
5. ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ಯಾವುದು ?
6. ಶೇಷನು ರಾಮಾಯಣದ ಕತೆಯನ್ನು ಯಾರಿಗೆ ಹೇಳಿದನು ?
7. ಲೇಖಕರು ಹೇಳುವ ಹಳ್ಳಿಯ ಹೋಟೆಲಿನ ಹೆಸರೇನು ?
8. ದುರ್ಗಪ್ಪನ ಪ್ರಕಾರ ತರ್ಲೆ ಡಿಪಾರ್ಟ್‌ಮೆಂಟ್ ಯಾವುದು ?
9. ಆನೆ ಯಾರ ಅಂಗಡಿಯನ್ನು ದೂಡಿ ಬೀಳಿಸಿತು ?
10. ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ ?

## ಆ– ವಿಭಾಗ

**2. (ಅ) ಈ ಕೆಳಗಿನ ನಾಲ್ಕು ಪ್ರಶ್ನೆಗಳಿಗೆ 2–3 ವಾಕ್ಯದಲ್ಲಿ ಉತ್ತರಿಸಿ. 2X4=8**

11. ಸೀತೆಯ ತಲ್ಲಣಕ್ಕೆ ಕಾರಣವೇನು ?
12. ಯಾವ ಗುಣಗಳಿಲ್ಲದವನು ಡಾಂಭಿಕನೆನಿಸುತ್ತಾನೆ ?
13. ದುರ್ಜನರ ಕಾರ್ಯ ಯಾವ ಬಗೆಯದು ?
14. ಬೆಳಕು–ಬೇಟಗಾರ ಹೇಗೆ ಬರುತ್ತಾನೆ ?
15. ದನಗಳಿಗೆ, ಜನಗಳಿಗೆ ಏನೇನು ಇಲ್ಲ ?

**(ಆ) ಈ ಕೆಳಗಿನ ಮೂರು ಪ್ರಶ್ನೆಗಳಿಗೆ 2–3 ವಾಕ್ಯದಲ್ಲಿ ಉತ್ತರಿಸಿ. 2X3=6**

16. ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ ?
17. ನದಿಯ ಒಡಲು ಯಾವಾಗ ಪ್ರಕ್ಷುಬ್ಧವಾಗಿರುತ್ತದೆ ?
18. ಕಲಾಂ ಅವರ ದೃಷ್ಟಿಯಲ್ಲಿ ಕನಸುಗಳು ಏನಾಗುತ್ತವೆ ?
19. ಸಂಸ್ಕೃತ–ಕನ್ನಡಗಳು ಸೇರಿದರೆ ಹೇಗೆ ಸೊಗಸಾಗಿರುತ್ತದೆ ?

**(ಇ) ಈ ಕೆಳಗಿನ ಮೂರು ಪ್ರಶ್ನೆಗಳಿಗೆ 2–3 ವಾಕ್ಯದಲ್ಲಿ ಉತ್ತರಿಸಿ. 3X2=6**

20. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು ?
21. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು ?
22. ನಿರೂಪಕರಿಗೆ ಆನೆಗಳ ಬಗ್ಗೆ ಯಾವ ಅನುಮಾನ ಮೂಡಿತು ?
23. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು ?

## ಇ– ವಿಭಾಗ

**3. (ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ 3X2=6**

24. ನಾಯ ಕೊಲಲಕ್ಷಮರು.
25. ಬಂಗಾರ ನಿನಗೆ ಸ್ಥಿರವಲ್ಲ.
26. ನೂರಾರು ಜಾಹೀರಾತುಗಳು ತಲೆಗೆ ತುರುಕಿದ್ದು.

**(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ 3X1=3**

27. ಹಾಡುವುದು ಅವುಗಳಿಗೆ ಅನಿವಾರ್ಯ; ಅವುಗಳ ಕರ್ಮ!
28. ಕನ್ನಡಿಗರು ಮೊದಲು ಕನ್ನಡಿಗರಾಗಬೇಕು.

**(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **3X1=3**

29. ವೆಪನ್ ಸಾರ್, ವೆಪನ್ ನಮಗೆ ಮುಖ್ಯ.
30. ಹೊರಗಡೆಯಿಂದ ಎಕ್ಸ್‌ಪೋರ್ಟ್ ಆದವು.

**ಈ– ವಿಭಾಗ**

**4. (ಅ) ಈ ಕೆಳಗಿನ ಮೂರು ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿ.** **4X3=12**

31. ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?
32. ಭೀಮನು ದ್ರೌಪದಿಯನ್ನು ಹೇಗೆ ಸಂತೈಸಿದನು?
33. ಮಾನವನ ಜೀವನದ ಸಾರ್ಥಕತೆ ಎಲ್ಲಿದೆಯೆಂದು ಕವಿ ಬೇಂದ್ರೆ ಹೇಳಿದ್ದಾರೆ?
34. ಯಾವ ಸ್ಥಳಗಳಲ್ಲಿ ಜೀಸಸ್ ದಿನನಿತ್ಯ ಶಿಲುಬೆ ಏರಿದ್ದಾನೆ? ಚರ್ಚಿಸಿ.

**(ಆ) ಈ ಕೆಳಗಿನ ಎರಡು ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿ.** **4X2=8**

35. ಬಸಲಿಂಗ ಕೊನೆಯಲ್ಲಿ ತೆಗೆದುಕೊಂಡ ನಿರ್ಧಾರ ಯಾವುದು? ಅದಕ್ಕೆ ಕಾರಣಗಳೇನು?
36. ಸೀತಾ ಎಂಬ ಗೆಳತಿಯ ಗುಣ–ಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ?
37. ಮುದ್ದಣ–ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿ.

**(ಇ) ಈ ಕೆಳಗಿನ ಎರಡು ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿ.** **4X2=8**

38. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?
39. ಬೀದಿನಾಯಿಗಳ ನಿವಾರಣೆಗೆ ಖಾನ್ ಸಾಹೇಬರು ತೆಗೆದುಕೊಂಡಿದ್ದ ಕ್ರಮಗಳಾವುವು?
40. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?

**ಉ– ವಿಭಾಗ**

**5. (ಅ) ಯಾವುದಾದರೂ ಒಂದು ಪದ್ಯಭಾಗವನ್ನು ಕುರಿತು ಭಾವಾರ್ಥ ಬರೆಯಿರಿ.** **5X1=5**

41. ಎಲ್ಲರೊಳು ಕಲಿಭೀಮನೆ ಮಿಡು
ಕುಳ್ಳಗಂಡನು ಹಾನಿ ಹರಿಬಕೆ
ನಿಲ್ಲದಂಗೈಸುವನು ಕಡು ಹೀಹಾಳಿಯುಳ್ಳವನು
ಖುಲ್ಲನಿವನುಪಟಳವನಾತಂ
ಗೆಲ್ಲವನು ಹೇಳುವೆನು ಬಳಿಕವ
ನಲ್ಲಿ ಹುರುಳಿಲ್ಲದೊಡೆ ಕುಡಿವೆನು ಘೋರತರ ವಿಷವ

42. ಸಾವಿರ ಗಾಲಿ ಉರುಳಿ ಹೊರಳುವ ರಸ್ತೆಯಂಚಿನಲ್ಲೇ
ಕೈಹಿಡಿದು ನಡೆಸಿದವಳು ಇರುವ ಒಂದಿಂಚು
ಕೋಣೆಯಲ್ಲೇ ಹೊರಲೋಕವನ್ನು ಪರಿಚಯಿಸಿ
ಎಚ್ಚರಿಕೆ ಕೊಟ್ಟವಳು.

**(ಆ) ಈ ಕೆಳಗಿನ ಆರು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ:** **2X6=12**

43. ಈ ಪದಗಳ ಅರ್ಥ ಬರೆಯಿರಿ: ಅನುರಕ್ತಿ, ಬಸದಿ
44. ಈ ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ: ತಲ್ಲಣ, ಅದುರು
45. ಈ ಪದಗಳಿಗೆ ತದ್ಭವ ಬರೆಯಿರಿ: ಕ್ಷಣ, ಸಂಸ್ಕೃತ
46. ಈ ನುಡಿಗಟ್ಟುಗಳನ್ನು ಸ್ವಂತವಾಕ್ಯದಲ್ಲಿ ಬಳಸಿರಿ: ಬಾಯಿತುರಿಕೆ, ತಲೆದಂಡ
47. ಈ ಪದಗಳಿಗೆ ಗುಣವಾಚಕ ಬರೆಯಿರಿ: ಕಾರ್ಮೋಡ, ಸಣ್ಣಕುರುಹು
48. ಈ ಕ್ರಿಯಾಪದಗಳ ಧಾತು ರೂಪ ಬರೆಯಿರಿ: ತಿಂದರು, ಕಾಣಲರಿಯೆ
49. ಈ ಪದಗಳ ಕಾಲಸೂಚಕವನ್ನು ಬರೆಯಿರಿ: ಸಾಗುತ್ತಿದೆ, ಹುಡುಕುವನು.

**(ಇ) ಈ ಕೆಳಗಿನ ವಿಷಯಗಳಲ್ಲಿ ಒಂದನ್ನು ಕುರಿತು ಪ್ರಬಂಧ ಬರೆಯಿರಿ.** **5X1=5**

50. ಭಯೋತ್ಪಾದನೆ ತಡೆಗಟ್ಟುವಲ್ಲಿ ಸರ್ಕಾರದ ಪಾತ್ರ.
51. ಹೆಚ್ಚುತ್ತಿರುವ ವೃದ್ಧಾಶ್ರಮಗಳು

**(ಇ) ಈ ಕೆಳಗಿನಗಳಲ್ಲಿ ಒಂದನ್ನು ಕುರಿತು ಪತ್ರಲೇಖನ ಬರೆಯಿರಿ.** **4X1=4**

52. ವಾರ್ಷಿಕ ಪರೀಕ್ಷೆಯ ಸಿದ್ಧತೆಯನ್ನು ತಿಳಿಸುತ್ತಾ ನಿಮ್ಮ ತಾಯಿಯವರಿಗೊಂದು ಪತ್ರ ಬರೆಯಿರಿ.
53. ವರ್ಗಾವಣೆ ಪ್ರಮಾಣಪತ್ರ ನೀಡುವಂತೆ ಕೋರಿ ನಿಮ್ಮ ಪ್ರಾಂಶುಪಾಲರಿಗೊಂದು ಪತ್ರ ಬರೆಯಿರಿ.

**(ಈ) ಈ ಕೆಳಗಿನ ಗಾದೆಮಾತುಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ.** **4X1=4**

54. ಕೆಲವರು ಗಳಿಸಿದೊಡೆ, ಕೆಲರುಂಡು ಜಾರುವರು.
55. ಉತ್ಸಾಹವೇ ಜೀವನ, ಚಿಂತೆಯೇ ಮುಪ್ಪು.

******